**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ.**

ಸಿ.ಸಿ. ನಂ.23/2018

CW-11/PW-3

| | | |
|---|---|---|
| ಹೆಸರು | : | ವಿ.ಎಸ್.ಶಿವಕುಮಾರ |
| ತಂದೆ ಹೆಸರು | : | ಲೇಟ್ ಶಿವಣ್ಣ |
| ವಯಸ್ಸು | : | 62 ವರ್ಷ |
| ವೃತ್ತಿ | : | ನಿವೃತ್ತ ಪೊಲೀಸ್ ನಿರೀಕ್ಷಕರು |
| ವಾಸ ಸ್ಥಳ | : | ತುಮಕೂರು |
| ದಿನಾಂಕ | : | 23-10-2025. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ದಿನಾಂಕಃ05.08.2017 ರಿಂದ 16.10.2018ರವರೆಗೆ ಎಸ್ ಬಿ ಸಿ ವೃತ್ತ ಕಛೇರಿಯಲ್ಲಿ ಸಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ05.08.2017 ರಂದು ಪ್ರಕರಣದ ಕಡತವನ್ನು ಚಾಸಾ 10 ಬೈಲಾಂಜನಯ್ಯ ರವರಿಂದ ಪಡೆದುಕೊಂಡಿರುತ್ತೇನೆ. ದಿನಾಂಕಃ 25.10.2017ರಂದು ಪ್ರಕರಣದ ಆರೋಪಿ ಸಾಗರ ನಾಯಕ್ ರವರ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ. ದೋಷಾರೋಪಣ ಪತ್ರ ಸಲ್ಲಿಸುವ ಮುಂಚೆ ದೂರಿನ ಮೂಲ ಪ್ರತಿಯನ್ನು ಮೈಸೂರು ರೈಲ್ವೆ ಪೊಲೀಸ್ ಠಾಣೆಯಿಂದ ತರಿಸಿಕೊಂಡಿರುವುದಿಲ್ಲ. ದೂರಿನ ದೃಢೀಕೃತ ಪ್ರತಿಯನ್ನು ಮಾತ್ರ ದೋಷಾರೋಪಣ ಪತ್ರದೊಂದಿಗೆ ಸಲ್ಲಿಸಿರುತ್ತೇನೆ. ದೂರು ಮತ್ತು ಎಫ್ ಐ ಆರ ನ ಮೂಲ ಪ್ರತಿಯನ್ನು ಮೈಸೂರು ರೈಲ್ವೆ ಪೊಲೀಸ್ ಠಾಣೆಯಿಂದ ತರಿಸುವಂತೆ ಕಛೇರಿಗೆ ಆದೇಶಿಸಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.